ಮಾಡತಕ್ಕಂತಹ ಕಾಲದಲ್ಲಿ ಸಭೆಗೆ ನಾವು ನೀವು ಸೇರಿ ಘನತೆ ಗೌರವ ತರಲಿಕ್ಕೆ ಪ್ರಯತ್ನ ಪಡಬೇಕು. ನಮ್ಮ ಕಡೆಗೂ ಇದು ಅಪ್ಲೈ ಆಗುತ್ತದೆ. ಸರಕಾರ ಕೂಡ ಬೇಜವಾಬ್ದಾರಿಯಿಂದ ನಡೆದುಕೊಳ್ಳಬಾರದೆನ್ನುವ ಶಬ್ದ ನಮಗೂ ಅಪ್ಲೈ ಆಗುತ್ತದೆ. ನಾವು ನಡೆದುಕೊಳ್ಳುವುದರಲ್ಲೂ ಅಥವಾ ಸದನದ ಕಾರ್ಯಕಲಾಪದಲ್ಲಿ ಭಾಗವಹಿಸುವಾಗ ಪದ ಪ್ರಯೋಗ ಮಾಡತಕ್ಕಂತಹ ಕಾಲದಲ್ಲಿ ಇಂತಹ ಪದಗಳನ್ನು ಆ ಕಡೆ, ಈ ಕಡೆ ಸಾಧ್ಯವಾದ ಮಟ್ಟಿಗೆ ಅವಾಯ್ಡ್ ಮಾಡಬಹುದು. ಅದು ರೂಲಿಂಗ್ ಕೊಡಲಿಕ್ಕೆ ಇಲ್ಲ. ಇಂತಹ ಪದಗಳ ಪ್ರಯೋಗವನ್ನು ಅನಿವಾರ್ಯ ಬಂದಾಗ ಮಾಡಬಹುದು. ಸಾಮಾನ್ಯವಾಗಿ ಬೇಡ ಎನ್ನುವ ದೃಷ್ಟಿಯಿಂದ ಅವರು ಹೇಳಿದ್ದಾರೆ.

ಅಧ್ಯಕ್ಷರು:– ಸಂದರ್ಭೋಚಿತವಾಗಿ ಇದರ ಬಳಕೆಯಾಗಲಿ ಎನ್ನುವುದು ನನ್ನ ಅಭಿಪ್ರಾಯ ಅಷ್ಟೆ.

ಶ್ರೀ ಹೆಚ್.ಎನ್. ನಂಜೇಗೌಡ:– ನನಗೆ ಒಂದು ಆಶ್ಚರ್ಯ. ಮಾನ್ಯ ವೀರಪ್ಪ ಮೊಯಿಲಿಯವರು ಈ ಸದನದ ಸದಸ್ಯರು. ಬಹುಶಃ ನಾನು ಅವರ ಸ್ಥಾನದಲ್ಲಿದ್ದೇನೆ. ಮಾನ್ಯ ಸದಸ್ಯರು ಮಾತನಾಡುತ್ತಾ ನಮ್ಮ ಪಕ್ಷದ ಬಗ್ಗೆ ಪ್ರಸ್ತಾಪ ಮಾಡುವಾಗ ರಕ್ತದ ಕೋಡಿಹರಿಸಿದರು ಎಂದು ಹೇಳಿದರು. He can't afford to be offensive. He is still trying to be offensive. ನನಗೆ ಅದೇ ಆಶ್ಚರ್ಯವಾಗುತ್ತದೆ. ಅವರ ಸ್ಥಾನದಲ್ಲಿ ನಾನು ಇದ್ದೇನೆ. ನಮ್ಮ ಕರ್ನಾಟಕ ಇತಿಹಾಸದಲ್ಲಿ ಒಬ್ಬ ಮುಖ್ಯಮಂತ್ರಿಯನ್ನು ಬೊಟ್ಟು ಮಾಡಿ ಅವರೇ ಪಕ್ಷದವರು ನೀನೇ ಈ ಪಾರ್ಟಿಯನ್ನು ನಿರ್ನಾಮ ಮಾಡುವುದಕ್ಕೆ ಕಾರಣವೆಂದು ಯಾರೂ ಹೇಳಿದ್ದಿಲ್ಲ. ಮಾನ್ಯ ಮೊಯಿಲಿಯವರ ಬಗ್ಗೆ ಆ ಪಾರ್ಟಿಯವರೇ ಹೇಳಿಕೊಂಡಿದ್ದಾರೆ. He has no moral authority to comment on the affairs of others.

MR. SPEAKER: I would allow you to make all the statements when they are present. That would enable me to understand each one of you better.

SRI H.N. NANJE GOWDA: Then also we will make.

ವಿತ್ತೀಯ ಕಾರ್ಯಕಲಾಪ

ಅನುಪೂರಕ ಅಂದಾಜುಗಳನ್ನು ಒಪ್ಪಿಸುವುದು

ಶ್ರೀ ಸಿದ್ದರಾಮಯ್ಯ (ಹಣಕಾಸು ಮತ್ತು ಯೋಜನಾ ಮಂತ್ರಿ):– ಮಾನ್ಯ ಅಧ್ಯಕ್ಷರೆ, ಭಾರತ ಸಂವಿಧಾನದ 205(1)ನೇ ಅನುಚ್ಛೇದದ ಮೇರೆಗೆ 1994–95ನೇ ಸಾಲಿಗೆ ಸಂಬಂಧಿಸಿದಂತೆ ಪೂರಕ ಅಂದಾಜು (ಎರಡನೇ ಕಂತು)ಗಳನ್ನು ಸಭೆ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು:– ಮಂಡಿಸಲಾಯಿತು.

ನಿಯಮ 334ರ ಮೇರೆಗೆ

1. ವಿಷಯ:– ಹಾಲು ಪೂರೈಸಿದ ಮೊತ್ತದ ಬಾಕಿ ನೀಡುವ ಬಗ್ಗೆ.

ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರ್):– ಮಾನ್ಯ ಅಧ್ಯಕ್ಷರೆ, ಧಾರವಾಡ ಜಿಲ್ಲೆಯಲ್ಲಿ ಅದರಲ್ಲೂ ವಿಶೇಷವಾಗಿ ಹಿರೇಕೆರೂರು ತಾಲ್ಲೂಕಿನ ಸಹಕಾರಿ ಹಾಲು ಉತ್ಪಾದಕರ ಸಂಘಗಳಿಗೆ ಅವುಗಳು ಹಾಲು ಪೂರೈಸಿದ ಬಾಬ್ತು ಮೊತ್ತದ ಬಾಕಿಯನ್ನು ಕೆ.ಎಂ.ಎಫ್ ಅವರು ಅನೇಕ